# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 321 (282) |
| ಉತ್ತರಿಸುವ ದಿನಾಂಕ | 11-12-2024 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ವಿಜಯಪುರ ಜಿಲ್ಲೆಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ರೈತರ/ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವ ಪ್ರಕರಣಗಳು ಎಷ್ಟು; | ವಿಜಯಪುರ ಜಿಲ್ಲೆಯ ಅಧೀನದಲ್ಲಿ ಒಟ್ಟು ಐದು ಉಪನೋಂದಣಿ ಕಛೇರಿಗಳು ಇದ್ದು, ಇದರಲ್ಲಿ ಹಿರಿಯ ಉಪ ನೋಂದಣಿ ಕಛೇರಿ, ವಿಜಯಪುರ ಕಛೇರಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖರೀದಿ ಪತ್ರ ಸಂಖ್ಯೆ:4546/24-25 ನೋಂದಾವಣೆಯಾಗಿದ್ದು, ಈ ಕುರಿತು ಪಕ್ಷಕಾರರು ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಸಂಖ್ಯೆ:0063/2024 ರಂತೆ ದೂರು ದಾಖಲಿಸಲಾಗಿದೆ ಮತ್ತು ಇಂಡಿ ಉಪನೋಂದಣಿ ಕಛೇರಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖರೀದಿ ಪತ್ರ ಸಂಖ್ಯೆ:19503/24-25 ನೋಂದಾವಣೆಯಾಗಿದ್ದು, ಈ ಕುರಿತು ಪಕ್ಷಕಾರರು ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಸಂಖ್ಯೆ:0042/2024 ದೂರು ದಾಖಲಿಸಿದೆ. |
| ಆ | ಜಿಲ್ಲೆಯಲ್ಲಿ ನಕಲಿ ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮುಂತಾದ ದಾಖಲೆಗಳನ್ನು ಸೃಷ್ಟಿಸಿ, ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವುದು/ ವರ್ಗಾಯಿಸಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕರು ನೋಂದಣಿ ಸಂದರ್ಭದಲ್ಲಿ ಆಧಾರ ಕಾರ್ಡ್ ಹಾಜರುಪಡಿಸದೇ ಇದ್ದಲ್ಲಿ, ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಕಛೇರಿಯಿಂದ ಹೊರಡಿಸಿರುವ ದಿನಾಂಕ:19-10-2011 ಮತ್ತು 14-11-2016 ರಂದು ಜ್ಞಾಪನ ಪತ್ರದಲ್ಲಿ ನಿರ್ದೇಶಿಸಲಾಗಿರುವ ಪಡೆಯಬೇಕಾಗಿರುವ ಗುರುತಿನ ಚೀಟಿಗಳನ್ನು ಪರಿಷ್ಕರಿಸಿ ಪಕ್ಷಕಾರರ ಪಾಸ್‌ಪೋರ್ಟ್ ಅಥವಾ ಪ್ಯಾನ್ ಕಾರ್ಡ್‌ಗಳನ್ನು ಕಡ್ಡಾಯವಾಗಿ ಪಡೆದುಕೊಂಡು ನೋಂದಣಿ ಕಾರ್ಯವನ್ನು ಮಾಡುವಂತೆ ಕ್ರಮವಹಿಸಲಾಗಿದೆ. |
| ಇ | ಉಪ ನೋಂದಣಿ ಕಛೇರಿಯಲ್ಲಿ ಮಧ್ಯವರ್ತಿಗಳು, ಸಿಬ್ಬಂದಿ ಮತ್ತು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆ ಎಂದು ವರದಿಗಳು ಬಂದರೂ ಸರ್ಕಾರ ಮೌನವಾಗಿರಲು ಕಾರಣಗಳೇನು; ಅವರ ಮೇಲೆ ಇಲ್ಲಿಯವರೆಗೆ ಕಠಿಣ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು; | ಉಪ ನೋಂದಣಿ ಕಛೇರಿಯಲ್ಲಿ ಮಧ್ಯವರ್ತಿಗಳು ಸಿಬ್ಬಂದಿ ಮತ್ತು ಅಧಿಕಾರಿಗಳು ಭಾಗಿಯಾಗಿರುವುದು ಈ ಜಿಲ್ಲೆಯಲ್ಲಿ ಕಂಡು ಬಂದಿರುವುದಿಲ್ಲವೆಂದು ಜಿಲ್ಲಾ ನೋಂದಣಾಧಿಕಾರಿಯವರು ವರದಿ ಮಾಡಿರುತ್ತಾರೆ. |

| | | |
|---|---|---|
| ಈ | ವಿಜಯಪುರ ನಗರ ಸ್ಥಾನ ಮತ್ತು ಇಂಡಿ ಹಾಗೂ ಇನ್ನಿತರ ಸ್ಥಳಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೂಮಿ ಕಬಳಿಸುವವರನ್ನು ಗುರುತಿಸಿ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಅಮಾಯಕರ ಮತ್ತು ಸರ್ಕಾರದ ಭೂಮಿ ವಾಪಸ್ಸು ಪಡೆಯಲು ಯಾವ ಕ್ರಮ ಕೈಗೊಳ್ಳಲಾಗುವುದು? | ಸರ್ಕಾರದ ಆದೇಶ ಸಂಖ್ಯೆ:ಕಂಇ/20/ಎಂಎನ್‌ಎಂಯು/2023, ದಿನಾಂಕ:**23-09-2024** ರಲ್ಲಿ ಒಟ್ಟು 18 ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಉಡುಪಿ, ಕಾರವಾರ, ಮಂಗಳೂರು, ಧಾರವಾಡ, ವಿಜಯಪುರ, ವಿಜಯನಗರ, ಕೊಡಗು, ಮೈಸೂರು, ಮಂಡ್ಯ, ರಾಮನಗರ, ಯಾದಗಿರಿ, ತುಮಕೂರು, ಶಿವಮೊಗ್ಗ, ಕೋಲಾರ, ಕಲಬುರ್ಗಿ, ಗದಗ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ದಿನಾಂಕ:07-10-2024 ರಿಂದ ಜಾರಿಗೆ ಬರುವಂತೆ ಇ-ಆಸ್ತಿ ತಂತ್ರಾಂಶವನ್ನು ಕಾವೇರಿ-2 ತಂತ್ರಾಂಶದೊಂದಿಗೆ ಸಂಯೋಜನೆಗೊಳಿಸಲು ಆದೇಶಿಸಲಾಗಿರುತ್ತದೆ.<br><br>ಇ-ಆಸ್ತಿ ಸಂಯೋಜನೆ ಕಡ್ಡಾಯ ಮಾಡುವ ಪೂರ್ವದಲ್ಲಿ ನಿವೇಶನ ನೋಂದಣಿ ಮಾಡಿಸಿ ನಂತರ ಸ್ಥಳೀಯ ಸಂಸ್ಥೆಗಳಿಂದ 'ಬಿ' ಖಾತೆ ಮಾಡಿಸುತ್ತಿದ್ದರು. ಪ್ರಸ್ತುತ ಇ-ಖಾತ ಮಾಡಿಸಿದ ನಂತರ ನೋಂದಣಿ ಮಾಡಿಸಬೇಕಿರುವುದರಿಂದ ಈ ರೀತಿ ಅನಧಿಕೃತ ನೋಂದಣಿ ನಿಂತಿದ್ದು, ಇದರಿಂದ ಸರ್ಕಾರಕ್ಕೆ ಅಪಾರ ನಷ್ಟ, ಯೋಜನಾ ರಹಿತ ಬಡಾವಣೆಗಳ ಬೆಳವಣಿಗೆ ಮತ್ತು ಅಮಾಯಕರಿಗೆ ಆಗುತ್ತಿದ್ದ ಅನ್ಯಾಯಕ್ಕೆ ಸಂಪೂರ್ಣ ಕಡಿವಾಣ ಹಾಕಲಾಗಿದೆ.<br><br>ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ಅತಿಯಾದ ಭ್ರಷ್ಟಚಾರ ನಡೆಯುತ್ತಿದೆ ಎಂಬ ದೂರು ಸರ್ವೆ ಸಾಮಾನ್ಯವಾಗಿತ್ತು. ಇದಕ್ಕೆ ಮ್ಯಾನ್ಯುಯಲ್ ಖಾತೆಗಳನ್ನು ಬಳಸಿ ನೋಂದಣಿ ಮಾಡುತ್ತಿರುವುದೇ ಕಾರಣವಾಗಿತ್ತು. ಈಗ ಇ-ಖಾತೆ ಸಂಯೋಜನೆಯಿಂದ ಭ್ರಷ್ಟಚಾರಕ್ಕೆ ಕಡಿವಾಣ ಹಾಕಲಾಗಿದೆ ಹಾಗೂ ಖೊಟ್ಟಿ ದಾಖಲೆಯೆಂಬುದು ತಿಳಿಯದೆ ನೋಂದಣಿಗಳನ್ನು ಮಾಡಿಸಿಕೊಂಡು ನಂತರ ನೈಜ ಹಕ್ಕುದಾರರು ಪೋಲೀಸ್ ಠಾಣೆಗೆ ಅಧಿಕಾರಿಗಳ ವಿರುದ್ಧ ದಾವೆ ಹೂಡುವುದು, ಇಲಾಖಾ ವಿಚಾರಣೆ ಮಾಡುವುದು, ಲೋಕಾಯುಕ್ತಕ್ಕೆ ದೂರು ನೀಡಿ ಸಾವಿರಾರು ಪ್ರಕರಣಗಳು ನಡೆಯುತ್ತಿವೆ. ಇ-ಖಾತೆ ಸಂಯೋಜನೆಯಿಂದ ಬಲ್ಲ ಮೂಲದಿಂದ ಸ್ವತ್ತಿನ ಮಾಹಿತಿ ಬರುವುದರಿಂದ ನಿಯಮಬಾಹಿರ ನಂದಣಿಗಳ್ಲನ್ನು ತಡೆಯಲಾಗುತ್ತಿದೆ.<br><br>ಇಲಾಖೆಯ ಆಡಳಿತವನ್ನು ಬಲಿಷ್ಠಗೊಳಿಸುವ ಮತ್ತು ಸಮಾನ ಕಾರ್ಯಹಂಚಿಕೆಯ ದೃಷ್ಟಿಯಿಂದ ಸೆಪ್ಟೆಂಬರ್ 2024 ರಿಂದ Anywhere ನೋಂದಣಿಯನ್ನು ಜಾರಿಗೊಳಿಸುವ ಮೂಲಕ ಸಾರ್ವಜನಿಕರು ಸಂಬಂಧಿಸಿದ ಜಿಲ್ಲೆಯ ಯಾವುದೇ ಉಪನೋಂದಣಾಧಿಕಾರಿಗಳ |

| | | |
|---|---|---|
| | | ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಒಂದೇ ಕಚೇರಿಯಲ್ಲಿ ಜನಸಂದಣಿ ಮತ್ತು ವಿಳಂಬವಾಗುವುದು ತಪ್ಪಿದೆ. ಸಾರ್ವಜನಿಕರು ತಮಗೆ ಜಿಲ್ಲೆಯಲ್ಲಿ ಅನುಕೂಲವಾದ ಯಾವುದಾದರು ಒಂದು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಅನುಕೂಲ ಕಲ್ಪಿಸಲಾಗಿದೆ ಹಾಗೂ ಕೆಲವು ಸುಳ್ಳು ಗುರುತಿನ ಚೀಟಿಯನ್ನು ಬಳಸಿ ನೋಂದಣಿ ಮಾಡಿಸಿಕೊಂಡು ಅಕ್ರಮಗಳಿಗೆ ಕಾರಣವಾಗುತ್ತಿದ್ದುದನ್ನು ತಡೆಯುವ ನಿಟ್ಟಿನಲ್ಲಿ ಆಧಾರ್ ಕಾರ್ಡ್/ಪ್ಯಾನ್ ಕಾರ್ಡ್/ ಪಾಸ್‌ಪೋರ್ಟ್ ಕಡ್ಡಾಯ ಮಾಡುವ ಮೂಲಕ Impersonation (ವ್ಯಕ್ತಿಕರಣ) ಪ್ರಕರಣಗಳನ್ನು ತಡೆಗಟ್ಟಲಾಗಿದೆ.<br><br>ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2023 (2023ರ ವಿಧಾನಸಭೆಯ ವಿಧೇಯಕ ಸಂಖ್ಯೆ-11) ರಂತೆ ನೋಂದಣಿ ಕಾಯ್ದೆ 1908ಗೆ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ತಿದ್ದುಪಡಿ ತಂದು ಕಲಂ 22-ಬಿ, ಸಿ ಮತ್ತು ಡಿ ಯನ್ನು ಸೇರ್ಪಡೆ ಮಾಡಲಾಗಿದ್ದು, ಇದರಿಂದಾಗಿ ಖೋಟಾ/ಸುಳ್ಳು ಸೃಷ್ಟನೆಯ ದಸ್ತಾವೇಜುಗಳು/ ದಾಖಲಾತಿಗಳನ್ನಾಧರಿಸಿ ದಸ್ತಾವೇಜುಗಳನ್ನು ನೋಂದಾಯಿಸಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ 03 ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿಸಲು ಅವಕಾಶವಿರುತ್ತದೆ.ಸದರಿ ತಿದ್ದುಪಡಿಯನ್ನು ಜಾರಿಗೆ ತರಲು ಕಾಯದೆಗಳ್ಲನ್ನು ರಚಿಸಲಾಗುತ್ತದೆ ಹಾಗು ಸಧ್ಯದಲ್ಲೆ ಪೋರ್ಣಗೋಳಿಸಲಾಗುವುದು. |

ಕಂಇ/228/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು